ಭಾಗ V

# ವಿಭಿನ್ನ ಅಗತ್ಯಗಳನ್ನು ಹೊಂದಿರುವ ಮಕ್ಕಳು | ಶಿಕ್ಷಕರು ಏನು ಮಾಡಬಹುದು

ಶೌರ್ಯಾ ಬಟಾರಿಯಾ

'ಮಕ್ಕಳ ಅಭಿವೃದ್ಧಿ, ವಿಶೇಷ ಅಗತ್ಯಗಳು ಮತ್ತು ಕಲಿಕೆ'ಯ (Child Development, Special Needs and Learning) ಕುರಿತ ಏಳು ತಿಂಗಳ ಅವಧಿಯ ಕೋರ್ಸ್‌ನ ಭಾಗವಾಗಿ ನಾನು ಕಾರ್ಯಯೋಜನೆಯೊಂದನ್ನು ಮಾಡಬೇಕಾಗಿದ್ದು, ಇದರ ಭಾಗವಾಗಿ, ಮಧ್ಯಪ್ರದೇಶದ ಹೋಶಂಗಾಬಾದ್ ಜಿಲ್ಲೆಯ ಬೋರ್ಖುಂಡ ಗ್ರಾಮದಲ್ಲಿ ವಾಸಿಸುವ ದೇವರಾಜ್ ಎಂಬ ಮಗುವಿನ ಪ್ರಕರಣ ಅಧ್ಯಯನವನ್ನು ಕೈಗೆತ್ತಿಗೊಂಡೆ. ಈ ಗ್ರಾಮವು ಸುಮಾರು 1000-1200 ಋಡಕಟ್ಟು ಜನಸಂಖ್ಯೆಯನ್ನು ಹೊಂದಿದ್ದು, ಅವರಲ್ಲಿ ಹೆಚ್ಚಿನವರು ದಿನಗೂಲಿಗಳಾಗಿದ್ದಾರೆ. ದೇವರಾಜ್ 11 ವರ್ಷದ ಬಾಲಕನಾಗಿದ್ದು, ಬಲಗೈಯ ಅಂಗವೈಕಲ್ಯ ಹೊಂದಿದ್ದಾನೆ. ಈ ಅಂಗವೈಕಲ್ಯದ ಕಾರಣದಿಂದಾಗಿ ಹೆತ್ತವರು ಆತ ಚಿಕ್ಕವನಿದ್ದಾಗಲೇ ಅವನನ್ನು ತೊರೆದರು ಮತ್ತು ಪ್ರಸ್ತುತ ಆತ ತನ್ನ ತಾಯಿಯ ಅಮ್ಮನೊಂದಿಗೆ ವಾಸಿಸುತ್ತಾನೆ. ದೇವರಾಜ್ ಬಳಿ ಗುರುತಿನ ಚೀಟಿ (ಜನನ ಪ್ರಮಾಣಪತ್ರ ಅಥವಾ ಆಧಾರ್ ಕಾರ್ಡ್) ಇಲ್ಲ, ಇದರಿಂದಾಗಿ ಆತ ಎಲ್ಲಾ ಸರ್ಕಾರಿ ಸವಲತ್ತುಗಳು ಮತ್ತು ಯೋಜನೆಗಳಿಂದ ವಂಚಿತನಾಗಿದ್ದಾನೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರ ಪತ್ರದ ಮೇರೆಗೆ ಗ್ರಾಮದ ಸರ್ಕಾರಿ ಶಾಲೆಯ ಶಿಕ್ಷಕರು ಅವನನ್ನು ಶಾಲೆಗೆ ಸೇರಿಸಿಕೊಂಡಿದ್ದಾರೆ. ಅವನು ನಿಯಮಿತವಾಗಿ ಶಾಲೆಗೆ ಹೋಗುವುದಿಲ್ಲ ಮತ್ತು ಇಡೀ ದಿನ ತನ್ನ ಸ್ನೇಹಿತ ಗೋಪಿಯೊಂದಿಗೆ ತಿರುಗಾಡಲು ಮತ್ತು ಆಟವಾಡಲು ಆಸಕ್ತಿ ತೋರುತ್ತಾನೆ.

## ಒಂದು ಬಾರಿ ಒಂದು ಹೆಜ್ಜೆ

ಅವನ ಸಾಮಾಜಿಕ, ಮಾನಸಿಕ ಮತ್ತು ಭಾವನಾತ್ಮಕ ನಡವಳಿಕೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಕಂಡುಹಿಡಿಯಲು ನಾನು ಅವರ ಅಜ್ಜಿ, ಅವರ ಶಿಕ್ಷಕರು ಮತ್ತು ಹಳ್ಳಿಯ ಜನರೊಂದಿಗೆ ಮಾತನಾಡಿದೆ. ಅವನು ಯಾರೊಂದಿಗೂ ಹೆಚ್ಚು ಬೆರೆಯುವವನಲ್ಲ ಎಂದು ನಾನು ಅರಿತುಕೊಂಡೆ ಮತ್ತು ಅವನ ಸ್ನೇಹಿತ ಗೋಪಿಯನ್ನು ಹೊರತುಪಡಿಸಿ, ಅವನು ಬೇರೆ ಯಾವುದೇ ಮಕ್ಕಳೊಂದಿಗೆ ಆಟವಾಡಲು ಇಷ್ಟಪಡುವುದಿಲ್ಲ. ಅವನು ಪಾನ್ ಮಸಾಲಾ ತಿನ್ನುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದಾನೆ (ಮತ್ತು ಅದನ್ನು ಖರೀದಿಸಲು ಹಣಕ್ಕಾಗಿ ಆಗಾಗ್ಗೆ ಕೋಪ ಮಾಡಿಕೊಂಡು ಕಿರುಚಾಡುತ್ತಿರುತ್ತಾನೆ).

ಆತ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಒಂದು ತಿಂಗಳಿಗಿಂತಲೂ ಕಡಿಮೆ ಕಾಲ ಶಾಲೆಗೆ ಹಾಜರಾಗಿದ್ದ, ತರಗತಿಯಲ್ಲಿ ಕುಳಿತುಕೊಳ್ಳುವುದು ಅವನಿಗೆ ಹಿಡಿಸುತ್ತಿರಲಿಲ್ಲ, ಯಾವಾಗಲೂ ಹೊರಗೆ ಹೋಗಬೇಕು ಎಂದು ಬಯಸುತ್ತಿದ್ದ ಮತ್ತು ಓದಿನ ಬಗ್ಗೆ ಯಾವುದೇ ಆಸಕ್ತಿ ತೋರಿಸುತ್ತಿರಲಿಲ್ಲ, ತರಗತಿಯಲ್ಲಿ ಕೇಳುವ ಯಾವ ಪ್ರಶ್ನೆಗಳಿಗೂ ಉತ್ತರಿಸದೆ ತರಗತಿಯಲ್ಲಿ ಸುಮ್ಮನೆ ನಿರಾಸಕ್ತನಾಗಿ ಕೂರುತ್ತಿದ್ದ ಎಂಬ ಮಾಹಿತಿಯು ಆತನ ಶಿಕ್ಷಕರಿಂದ ದೊರಕಿತು. ಸಮುದಾಯದೊಂದಿಗಿನ ಚರ್ಚೆಯ ಸಮಯದಲ್ಲಿ, ಅವನ ಸುತ್ತಲಿನ ಜನರು ಅವನ ಬಗ್ಗೆ ಮರುಕ ವ್ಯಕ್ತಪಡಿಸುವುದು ಮತ್ತು ಅವನ ಅದೃಷ್ಟವನ್ನು ಹಳಿಯುವುದನ್ನು ನಾನು ಗಮನಿಸಿದೆ. ಇತರ ಮಕ್ಕಳು ಅವನನ್ನು ಬೆದರಿಸುತ್ತಿದ್ದರು ಮತ್ತು ಅಪಹಾಸ್ಯ ಮಾಡುತ್ತಿದ್ದರು, ಅವನನ್ನು ವಿವಿಧ ಅಡ್ಡ ಹೆಸರುಗಳನ್ನು ಹಿಡಿದು ಕರೆಯುತ್ತಿದ್ದರು.

ನಂತರ ನಾನು ಅವನನ್ನು ಭೇಟಿ ಮಾಡಲು ಅವರ ಮನೆಗೆ ಹೋಗಿದ್ದೆ. ಅವನ ಮನೆಯನ್ನು ಹುಡುಕುತ್ತಾ, ನಾನು ನೆರೆಹೊರೆಯಲ್ಲಿ ವಿಚಾರಿಸಿದೆ ಮತ್ತು ಅವನ ನೆರೆಹೊರೆಯವರು ದೂರದಿಂದ ಹಾಸಿಗೆಯ ಮೇಲೆ ಮಲಗಿರುವ ಹುಡುಗನನ್ನು ತೋರಿಸಿದರು. ನಾನು ಅವನನ್ನು ಕರೆದಾಗ, ಈ ಹುಡುಗ ನನ್ನೆಡೆಗೆ ಮುಜುಗರದ ನಗು ಬೀರುತ್ತಾ ಬಂದನು. ನಾನು ಆಗ ಆತನ ಕಾಲಿನಲ್ಲಿಯೂ ಅಂಗವೈಕಲ್ಯ ಇದ್ದಂತಿರುವುದನ್ನು ಗಮನಿಸಿದೆ.

ಅವನು ನನ್ನೆಡೆಗೆ ನಡೆಯುತ್ತಿದ್ದಂತೆ ನನ್ನ ಮನದಲ್ಲಿ ಬಗೆಬಗೆಯ ಪ್ರಶ್ನೆಗಳು ಮೂಡಿದವು. ಅವನು ನನ್ನೊಂದಿಗೆ ಮುಕ್ತವಾಗಿ ಮಾತನಾಡುತ್ತಾನೆಯೇ? ಇದೇ ಮೊದಲ ಬಾರಿಗೆ ನಾನು ಅಂಗವೈಕಲ್ಯ ಹೊಂದಿರುವ ಮಗುವಿನೊಂದಿಗೆ ನೇರವಾಗಿ ಕೆಲಸ ಮಾಡುತ್ತಿದ್ದೇನೆ, ಇದರ ಮೂಲಕ ನಾನು ಅವನಿಗೆ ಸಹಾಯ ಮಾಡಲು ಸಾಧ್ಯವೇ? ಅವನ ಕುಟುಂಬ ಎದುರಿಸುತ್ತಿರುವ ಸವಾಲುಗಳನ್ನು ಅವನು ನನ್ನೊಂದಿಗೆ ಮನಸ್ಸು ಬಿಚ್ಚಿ ಹಂಚಿಕೊಳ್ಳುತ್ತಾನೆಯೇ? ನನ್ನ ಕಾರ್ಯ-ಯೋಜನೆಯನ್ನು ಪೂರ್ಣಗೊಳಿಸಲು ಮಾತ್ರ ನಾನು ಅಲ್ಲಿಗೆ ಬಂದಿದ್ದೇನೆ ಎಂದು ಅವರ ಕುಟುಂಬ ಭಾವಿಸುತ್ತದೆಯೇ? ನನ್ನ ಪ್ರಶ್ನೆಗಳು ಅವನನ್ನು ನೋಯಿಸಿದರೆ ಏನು ಮಾಡುವುದು? ಈ ಎಲ್ಲಾ ಪ್ರಶ್ನೆಗಳ ನಡುವೆಯೂ ನಾನು ಈ ವಿಷಯವನ್ನು ಸೂಕ್ಷ್ಮವಾಗಿ ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ನನಗೆ ಸಂಪೂರ್ಣ ಅರಿವಿತ್ತು. ಬಹಳ ಮೃದುವಾಗಿ, ನಾನು ಅವನ ಹೆಸರನ್ನು ಎರಡೆರಡು ಬಾರಿ ಕೇಳಿದೆ. ಅವನ ನೆರೆಯವರು ನನ್ನ ಬಳಿ ಪಿಸುಗುಟ್ಟಿದರು, 'ರಾಜಾ'; ಅವನು ನೆರೆಯವರನ್ನು ನೋಡಿ ಮುಗುಳ್ನಕ್ಕು ಮುಗ್ಧತೆಯಿಂದ ತುಂಬಿದ, ಪ್ರಕಾಶಮಾನವಾದ, ಹೊಳೆಯುವ ಕಣ್ಣುಗಳಿಂದ ನನ್ನತ್ತ ನೋಡಿದನು. ನಾನು ನನ್ನ ಪ್ರಶ್ನೆಯನ್ನು ಬದಲಾಯಿಸಿ, 'ನಿನ್ನ ಹೆಸರು ರಾಜಾನಾ?' ಎಂದು ಕೇಳಿದೆ.

ಆತ 'ದೇವರಾಜ್' ಎಂದು ಜೋರಾಗಿ ಸ್ಪಷ್ಟವಾಗಿ ಮತ್ತು ಆತ್ಮವಿಶ್ವಾಸದಿಂದ ಹೇಳಿದ. ಗಟ್ಟಿಯಾದ ದನಿಯಲ್ಲಿ ಜನರು ಅವನ ಕುರಿತು ಮಾತನಾಡುವುದರ ಬಗ್ಗೆ ಆತನಿಗೆ ಕೋಪವಿದೆ ಎಂದು ನನಗೆ ಅನಿಸಿತು.

ಕೆಲವು ಭೇಟಿಗಳ ನಂತರ, ನಾನು ಸುತ್ತಲಿನ ಜನರು ಅವನು ನಮ್ಮಿಂದ ಭಿನ್ನವಾಗಿದ್ದಾನೆ ಮತ್ತು ಎಂದಿಗೂ ಸಾಮಾನ್ಯರಂತೆ ಜೀವನ ನಡೆಸಲು ಸಾಧ್ಯವಾಗುವುದಿಲ್ಲ ಎಂದು ಆತನೇ ಯೋಚಿಸುವಂತೆ ಮಾಡಿದ್ದಾರೆ ಎಂದು ಅರಿತುಕೊಂಡೆ; ಅವನ ಅಜ್ಜಿಯ ನಂತರ, ಅವನನ್ನು ನೋಡಿಕೊಳ್ಳಲು ಯಾರೂ ಇರುವುದಿಲ್ಲ – ಇದು ಅವನನ್ನು ಹೆದರಿಸುತ್ತಿರುವ ವಾಸ್ತವ ಸತ್ಯ. ಅವನೊಂದಿಗಿನ ನನ್ನ ಸಂಭಾಷಣೆಗಳಿಂದ, ಸ್ವತಃ ತಾನು 'ವಿಶೇಷ' ಎಂದು ಪರಿಗಣಿಸಲು ಆತ ಬಯಸುವುದಿಲ್ಲ ಅಥವಾ ಇತರರಂತೆ ಅವನ ದೈನಂದಿನ ಕೆಲಸಗಳಿಗೆ ಬೇರೆಯವರ ಸಹಾಯವನ್ನು ಕೇಳುವವನಲ್ಲ ಎಂದು ನಾನು ತಿಳಿದುಕೊಂಡೆ. ಯಾರೊಬ್ಬರೂ ತನ್ನ ಬಗ್ಗೆ ಅನುಕಂಪ ತೋರುವುದು ಅಥವಾ 'ಅವನ ಅದೃಷ್ಟ'ವನ್ನು ದೂಷಿಸುವುದು ಅವನಿಗೆ ಇಷ್ಟವಿರಲಿಲ್ಲ. ಅವನು ತನ್ನ ಜೀವನವನ್ನು ಸಂಪೂರ್ಣವಾಗಿ ಬದುಕಲು ಮತ್ತು ತನ್ನನ್ನು ಇತರ ಎಲ್ಲ ಮಕ್ಕಳಂತೆ ಸಮಾನವಾಗಿ ಕಾಣಬೇಕೆಂದು ಬಯಸಿದ್ದ. ದೇವರಾಜ್ ಯಾರ ಸಹಾಯವನ್ನೂ ಬಯಸಲಿಲ್ಲ; ಅವರು ತನ್ನನ್ನು ಸ್ವೀಕರಿಸುವುದನ್ನು ಬಯಸಿದ್ದ. ಇದಿಷ್ಟನ್ನು ಅರ್ಥ ಮಾಡಿಕೊಳ್ಳುವುದರಿಂದ ಆತನಿಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ನಾನು ಹೇಗೆ ಮುಂದುವರಿಯ-ಬೇಕು ಎಂಬುದರ ಕುರಿತು ನನಗೆ ಸ್ಪಷ್ಟತೆ ಸಿಕ್ಕಿತು.

ನನ್ನ ಅವನ ಭೇಟಿಯ ಸಮಯದಲ್ಲಿ, ಅವನಿಗೆ ಅನುಕೂಲಕರವಾದ, ಯಾವುದೇ ಹಿಂಜರಿಕೆ ಇಲ್ಲದೆ ಮುಕ್ತವಾಗಿ ಮಾತನಾಡುವ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಿದೆ. ನಾವು ಪರಸ್ಪರರಿಗೆ ಇಷ್ಟ ಇರುವ ವಿಷಯಗಳು ಮತ್ತು ಇಷ್ಟಪಡದಿರುವಿಕೆಗಳನ್ನು ಚರ್ಚಿಸಿದ್ದೇವೆ ಮತ್ತು ವಿವಿಧ ರೀತಿಯ ಆಟಗಳು ಮತ್ತು ಚಟುವಟಿಕೆಗಳನ್ನು ಆನಂದಿಸಿದ್ದೇವೆ. ನಾವು ಚೆಂಡನ್ನು ಆಡಿದಾಗ, ಕೆಲವೊಮ್ಮೆ ನನಗೆ ನನ್ನ ಎರಡೂ ಕೈಗಳಿಂದಲೂ ಅದನ್ನು ಹಿಡಿಯಲು ಸಾಧ್ಯವಾಗಲಿಲ್ಲ ಆದರೆ ಅವನು ತನ್ನ ಒಂದೇ ಕೈಯಿಂದ ಪ್ರತಿ ಬಾರಿ ಚೆಂಡನ್ನು ಹಿಡಿಯುತ್ತಿದ್ದ. ನಿಧಾನವಾಗಿ, ನಾವು ಒಟ್ಟಿಗೆ ಹೆಚ್ಚು ಸಮಯ ಕಳೆಯಲು ಪ್ರಾರಂಭಿಸಿದೆವು ಮತ್ತು ಅವನು ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದ, ಅದು ಅವನ ಆಸಕ್ತಿಯ ವಿಷಯವಾಗಿತ್ತು. ಅವನು ಮಾಡುವ ಎಲ್ಲಾ ಕೆಲಸದಲ್ಲೂ, ಒಂದು ಕೈಯನ್ನು ಸಂಪೂರ್ಣವಾಗಿ ಬಳಸಲು ಅವನಿಗಿರುವ ಅಸಮರ್ಥತೆ ಅವನ ಚಟುವಟಿಕೆಗಳಿಗೆ ಅಡ್ಡಿಯಾಗಿದೆ ಎಂದು ಎಲ್ಲೂ ನನಗೆ ಅನಿಸಲಿಲ್ಲ. ನಾನು ಅವನು ತನ್ನ ಸಾಮರ್ಥ್ಯವನ್ನು ಗುರುತಿಸಲು ಸಹಕರಿಸಿದೆ ಮತ್ತು ಅದನ್ನು ಪ್ರಶಂಸಿದೆ.

ನಾವು ಒಬ್ಬರಿಗೊಬ್ಬರು ಚೆನ್ನಾಗಿ ಹೊಂದಿಕೊಳ್ಳಲಾರಂಭಿಸಿದೆವು ಮತ್ತು ನಮ್ಮಿಬ್ಬರಿಗೆ ಪರಸ್ಪರರ ಉಪಸ್ಥಿತಿ ಹಿತಕರ ಅನುಭವ ಮತ್ತು ಪ್ರೇರಣೆಯನ್ನು ಒದಗಿಸಿತು. ನಾನು ಅವರ ಹಳ್ಳಿಗೆ ಹೋದಾಗಲೆಲ್ಲಾ ಅವನು ಬಂದು ನನ್ನ ಕೈ ಹಿಡಿದುಕೊಂಡು, ನೇರವಾಗಿ ಅವರ ಮನೆಗೆ ಕರೆದುಕೊಂಡು ಹೋಗಿ ಅವನು ಬಿಡಿಸಿದ ಚಿತ್ರವನ್ನು ತೋರಿಸುತ್ತಿದ್ದ.

ಕ್ರಮೇಣ, ಜೀವನದಲ್ಲಿ ಉತ್ತಮವಾದುದನ್ನು ಸಾಧಿಸಲು ಅವನು ತೋರಿದ ಉತ್ಸಾಹವು ನಾನು ಅವನನ್ನು ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರಕ್ಕೆ (MohLAC) ಕರೆದೊಯ್ಯುವಂತೆ ಮಾಡಿತು, ಇಲ್ಲಿ ಆತ ಹೊಸ ಸ್ನೇಹಿತರನ್ನು ಮಾಡಿಕೊಳ್ಳ-ಬಹುದಾಗಿತ್ತು. ಇದು ಕೋವಿಡ್–19 ಅವಧಿಯಲ್ಲಿ ಅರ್ಥಪೂರ್ಣ ಕಲಿಕೆಯೊಂದಿಗೆ ತಮ್ಮ ನಿರಂತರ ತೊಡಗಿಸಿಕೊಳ್ಳುವಿಕೆಗಾಗಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ಏಕಲವ್ಯ ಫೌಂಡೇಷನ್ ರೂಪಿಸಿದ ಸಮುದಾಯದ ಯುವಕರು ನಿರ್ವಹಿಸುವ ಸುರಕ್ಷಿತ ಸ್ಥಳವಾಗಿದೆ.

## ಕೆಲವು ಅವಲೋಕನಗಳು

ಒಂದು ನಿರ್ದಿಷ್ಟ ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಒಂದು ದಿನ ಕೇಂದ್ರದಲ್ಲಿ, ನಾನು ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳಿದೆ. ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ನಿರತರಾಗಿದ್ದಾಗ, ದೇವರಾಜ್ ಪಕ್ಕದಲ್ಲಿ ನಿಂತಿದ್ದ ಹುಡುಗಿಯನ್ನು ನಾನು ಗಮನಿಸಿದೆ, ಅವನಿಗೆ ಆರಾಮವೆನಿಸುವಂತೆ ಅವನ ಕೈ ಹಿಡಿಯಲು ತನ್ನ ಕೈಯನ್ನು ಸರಿಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಈ ಸ್ವಾಭಾವಿಕ ಸ್ನೇಹಪರ ಕ್ರಿಯೆಯ ಮೂಲಕ ಆಕೆ, ಸಮಾಜವು ತನ್ನ ವರ್ತನೆಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು ಮತ್ತು ವಿಶೇಷ ಅಗತ್ಯ ಬೇಕಾದ ವ್ಯಕ್ತಿಗಳನ್ನು ಎಲ್ಲರೊಂದಿಗೆ ನಡೆದುಕೊಳ್ಳುವ ರೀತಿಯಲ್ಲಿಯೇ ಸರಿಸಮಾನವಾಗಿ ನಡೆಸಿಕೊಳ್ಳಬೇಕು ಎಂಬ ಸುಂದರವಾದ ಸಂದೇಶವನ್ನು ನೀಡುತ್ತಿದ್ದಾಳೆ ಎಂದು ನಾನು ಭಾವಿಸಿದೆ. ಪ್ರತಿಯೊಬ್ಬರೂ ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿದ್ದಾರೆ; ಕೆಲವರು ಸುಂದರವಾಗಿ ನೃತ್ಯ ಮಾಡಬಹುದು, ಮತ್ತು ಕೆಲವರು ಸುಶ್ರಾವ್ಯವಾಗಿ ಹಾಡಬಹುದು. ಹೀಗಿರುವಾಗ ಕೆಲವರಿಗೆ ಮಾತ್ರ 'ವಿಭಿನ್ನ ಸಾಮರ್ಥ್ಯವುಳ್ಳವರು' ಎಂಬ ಹಣೆಪಟ್ಟಿ ಏಕೆ ನೀಡಲಾಗಿದೆ? ಇದು ಚಿಂತನೆಗೆ ಒಡ್ಡುವ ಪ್ರಶ್ನೆ.

ಇನ್ನೊಂದು ಸಂದರ್ಭದಲ್ಲಿ, ನಾವು ಗುಂಪಾಗಿ ಕುಳಿತು ದೈಹಿಕ ಚಲನೆಯ ಅಗತ್ಯವಿರುವ ಕೆಲವು ಗುಂಪು ಚಟುವಟಿಕೆಗಳನ್ನು ನಡೆಸಿದೆವು. ಆಗ ದೇವರಾಜ್ ಈ ಚಟುವಟಿಕೆಗಳನ್ನು ಸ್ವಲ್ಪ ನಿಧಾನವಾಗಿ ಮಾಡುತ್ತಿದ್ದ, ಆದರೆ ಯಾರೂ ಆ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣಿಸಲಿಲ್ಲ; ಅವರೆಲ್ಲರೂ ಆ ಚಟುವಟಿಕೆಗಳನ್ನು ಆನಂದಿಸುತ್ತಿದ್ದರು.

ದೇವರಾಜ್ ಕೇಂದ್ರಕ್ಕೆ ಯಾವಾಗಲೂ ಬರುತ್ತಿದ್ದ ಮತ್ತು ಬಂದು ಹೊಸ ಸ್ನೇಹಿತರನ್ನು ಮಾಡಿಕೊಂಡ. ಅವನು ನನ್ನನ್ನು ಅವನ ದೀದಿ (ಅಕ್ಕ) ಎಂದು ಪರಿಚಯಿಸುತ್ತಿದ್ದ ಮತ್ತು ಶೀಘ್ರದಲ್ಲೇ ಅವನ ಸುತ್ತಮುತ್ತಲಿನ ಎಲ್ಲರೂ ನನ್ನನ್ನು 'ದೇವರಾಜ್ ಕಿ ದೀದಿ'


(ದೇವರಾಜನ ಅಕ್ಕ) ಎಂದು ಕರೆಯಲಾರಂಭಿಸಿದರು. ಈಗ, ಅಜ್ಜಿಯ ಅನುಪಸ್ಥಿತಿಯಲ್ಲಿ ಅವನು ಹೇಗಿರುತ್ತಾನೆ ಎಂದು ಇತರರು ಯೋಚಿಸುವುದಿಲ್ಲ ಮತ್ತು ಅವನನ್ನೂ ಈ ಬಗ್ಗೆ ಚಿಂತಿಸುವಂತೆ ಮಾಡುವುದಿಲ್ಲ ಎಂದು ತಿಳಿದು ನನಗೆ ಸಂತೋಷವಾಗುತ್ತದೆ. ಪ್ರಸ್ತುತ, ದೇವರಾಜ್ ತನ್ನ ಹೊಸ ಸ್ನೇಹಿತರೊಂದಿಗೆ ಕೇಂದ್ರ ಮತ್ತು ಅವನ ಶಾಲೆಗೆ ಹೋಗುವುದನ್ನು ಮುಂದುವರೆಸಿದ್ದಾನೆ. ನಾನು ವಾರಕ್ಕೊಮ್ಮೆ ಅವನನ್ನು ಭೇಟಿ ಮಾಡುತ್ತೇನೆ ಮತ್ತು ಸಾಧ್ಯವಾದಷ್ಟು ಅವನೊಂದಿಗೆ ಇರಲು ಪ್ರಯತ್ನಿಸುತ್ತೇನೆ.

ನಾನು ಮೊದಲೇ ಹೇಳಿದಂತೆ, ವಿಶೇಷ ಅಗತ್ಯ ಬೇಕಾದ ಮಕ್ಕಳಿಗೆ ತಮ್ಮ ಕುರಿತು ಸಹಾನುಭೂತಿ ಹೊಂದಿರುವ ಮತ್ತು ತಮ್ಮ ಕಷ್ಟಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವವರ ಅಗತ್ಯವಿರುವಷ್ಟು ಸಹಾಯದ ಅಗತ್ಯವಿರುವುದಿಲ್ಲ. ಅವರಲ್ಲಿ ನಂಬಿಕೆ ಇಡುವ ಮತ್ತು ಅವರ ಸಾಮರ್ಥ್ಯಗಳನ್ನು ತೋರಿಸುವವರ ಪ್ರೋತ್ಸಾಹ, ಪ್ರೀತಿ ಮತ್ತು ಕಾಳಜಿಯು ಅವರ ಆತ್ಮವಿಶ್ವಾಸ, ವ್ಯಕ್ತಿತ್ವ ಮತ್ತು ಅವರು ಬದುಕುವ ರೀತಿಯಲ್ಲಿ ಅದ್ಭುತಗಳನ್ನೇ ಸೃಷ್ಟಿಸಬಹುದು, ಅದನ್ನು ಸಂತೋಷಭರಿತ ಮತ್ತು ಸುಂದರವನ್ನಾಗಿಸಬಹುದು. ಏಳು ವಿಭಿನ್ನ ಬಣ್ಣಗಳು ಮಳೆಬಿಲ್ಲನ್ನು ಸುಂದರವಾಗಿಸುತ್ತವೆ. ಎಲ್ಲಾ ಮಕ್ಕಳು ಒಂದೇ ರೀತಿ ಇರಬೇಕು ಮತ್ತು ಒಂದೇ ರೀತಿಯ ಕೆಲಸಗಳನ್ನು ಮಾಡಬೇಕು ಎಂದು ನಾವು ಏಕೆ ಬಯಸುತ್ತೇವೆ? ಭಿನ್ನತೆಗಳಲ್ಲಿ, ವೈವಿಧ್ಯತೆಯಲ್ಲಿ ಸೌಂದರ್ಯವಿದೆ. ವೈಯಕ್ತಿಕ ಭಿನ್ನಾಭಿ–ಪ್ರಾಯಗಳಿಗೆ ನಮ್ಮನ್ನು ನಾವು ತೆರೆದುಕೊಳ್ಳೋಣ ಮತ್ತು ಪ್ರತಿಯೊಬ್ಬರನ್ನೂ ಅವರು ಹೇಗಿದ್ದಾರೆಯೋ ಹಾಗೆಯೇ ಸ್ವೀಕರಿಸೋಣ.



ಚಿತ್ರ 1: ದೇವರಾಜ್‌ನೊಂದಿಗೆ ಲೇಖಕರು- ಆತ ಕಲ್ಲುಗಳನ್ನು ಎಣಿಸಲು ಕಲಿಯುತ್ತಿರುವುದು





ಚಿತ್ರ 2: ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರದಲ್ಲಿ ದೇವರಾಜ್‌ಗೆ ಬರೆಯಲು ಸಹಾಯ ಮಾಡುತ್ತಿರುವುದು

ಚಿತ್ರ 3: ದೇವರಾಜ್ ಚಿತ್ರ ಬಿಡಿಸುತ್ತಿರುವುದು

*ಮಕ್ಕಳ ಗುರುತನ್ನು ರಕ್ಷಿಸಲು ಹೆಸರನ್ನು ಬದಲಾಯಿಸಲಾಗಿದೆ

## ಅಡಿ ಟಿಪ್ಪಣಿ

I ಏಕಲವ್ಯ– ಮಕ್ಕಳ ಅಭಿವೃದ್ಧಿ, ವಿಶೇಷ ಅಗತ್ಯಗಳು ಮತ್ತು ಕಲಿಕೆ– ಎಂಬ ವಿಷಯದ ಕುರಿತು ಏಳು ತಿಂಗಳ ಸರ್ಟಿಫಿಕೇಟ್ ಕೋರ್ಸ್ ನಡೆಸುತ್ತಿದೆ – ಏಕಲವ್ಯ ಮತ್ತು ದೆಹಲಿ ವಿಶ್ವವಿದ್ಯಾಲಯದ ಇನ್ಸ್ಟಿಟ್ಯೂಟ್ ಆಫ್ ಹೋಮ್ ಎಕನಾಮಿಕ್ಸ್‌ನ ಹಿರಿಯ ಅಧ್ಯಾಪಕರು ಈ ಕೋರ್ಸ್ ಅನ್ನು ವಿನ್ಯಾಸಗೊಳಿಸಿ, ತರಗತಿಗಳನ್ನು ನಡೆಸುತ್ತಿದ್ದಾರೆ. ಇದು ವಿಶೇಷವಾಗಿ ಭಾರತದಲ್ಲಿ ಸೌಲಭ್ಯವಂಚಿತ ಹಿನ್ನೆಲೆಯಿಂದ ಬಂದ ಮಕ್ಕಳು ಮತ್ತು ಅವರ ಬಾಲ್ಯವನ್ನು ಅರ್ಥಮಾಡಿಕೊಳ್ಳುವುದರ ಮೇಲೆ ಕೇಂದ್ರೀಕೃತವಾಗಿದೆ.




**ಶೌರ್ಯಾ ಬಟಾರಿಯಾ** ಅವರು ಮಧ್ಯಪ್ರದೇಶದ ಹೋಶಂಗಾಬಾದ್ ಜಿಲ್ಲೆಯ ಸಿಯೋನಿ–ಮಾಲ್ವಾ ಬ್ಲಾಕ್‌ನಲ್ಲಿ HITEC ಯೋಜನೆಯಡಿ ಯೋಜನಾ ಸಹಾಯಕರಾಗಿ ಏಕಲವ್ಯ ಕೆಲಸ ಮಾಡುತ್ತಾರೆ. ಅವರು ದೆಹಲಿ ವಿಶ್ವವಿದ್ಯಾಲಯದಿಂದ ಪದವಿ ಮತ್ತು ರೋಜರ್ಟ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಿಂದ ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾವನ್ನು ಪೂರ್ಣಗೊಳಿಸಿದ್ದಾರೆ. ಇವರು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಲು, ಸಮನ್ವಯ ವಾತಾವರಣವನ್ನು ಸೃಷ್ಟಿಸಲು ಮತ್ತು ಅತ್ಯಾಧುನಿಕ ಕಲಿಕಾ ಅನುಭವಗಳನ್ನು ನೀಡಲು ಇಷ್ಟಪಡುತ್ತಾರೆ. ಅವರನ್ನು shaurya.delhi2011@gmail.com ಮೂಲಕ ಸಂಪರ್ಕಿಸಬಹುದು.



ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ನಾಗಮಣಿ ಎಸ್.ಎನ್.**